# MYSORE LEGISLATIVE ASSEMBLY

## FIRST SESSION, 1962

### THIRTY-NINTH DAY.

*Monday, 30th July 1962.*

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

## STARRED QUESTIONS

### (to which oral answers were given)

### Providing of Telephone to Channagiri.

*Q.—193. Sri KUNDUR RUDRAPPA (Channagiri).—

Will the Government be pleased to state :—

(*a*) whether it is a fact that Government have ordered to give telephone to each taluk headquarters ;

(*b*) if so, when the orders to this effect have been passed ;

(*c*) whether they have provided telephone to Channagiri town ;

(*d*) if not, why ?

*A.—Sri M. V. KRISHNAPPA (Minister for Revenue).—

(*a*) Yes, wherever local Telephone Exchanges exist and where there are many other offices having telephone connections.

(*b*) On 7-10-1961,
on 1-12-1961,
on 4-1-1962,
on 12-1-1962 and
on 15-3-1962.

(*c*) No.

(*d*) As there is no telephone exchange in Channagiri Town.

ಶ್ರೀ ಕುಂದೂರು ರುದ್ರಪ್ಪ.—ನನ್ನ (*a*) ಪ್ರಶ್ನೆಗೆ ಉತ್ತರವಾಗಿ ಪ್ರತಿಯೊಂದು ತಾಲ್ಲೂಕು ಹೆಡ್ ಕ್ವಾರ್ಟರಿಗೆ ಟೆಲಿಫೋನ್ ಒದಗಿಸಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುವುದು ನಿಜ ಎಂದು ಒಪ್ಪಿಕೊಂಡಿದ್ದೀರಿ, ಆ ಮೇರೆ (*c*) ಪ್ರಶ್ನೆಗೆ ಉತ್ತರವಾಗಿ ಚನ್ನಗಿರಿ ಟೌನಿನಲ್ಲಿ ಟೆಲಿಫೋನ್ ಎಕ್ಸ್‌ಚೇಂಜ್ ಇಲ್ಲದೆ ಇರುವುದರಿಂದ ಒದಗಿಸಿಲ್ಲ ಎಂದು ಹೇಳಿದ್ದೀರಿ ; ಆದಕ್ಕೆ ಕಾರಣವೇನು ? ಸರ್ಕಾರದ ಪಾಲಿಸಿ ಪ್ರಕಾರ ಕೊಡುತ್ತೇವೆಂದು ಒಪ್ಪಿಕೊಳ್ಳುತ್ತೀರಿ, ಇನ್ನೊಂದು ಕಡೆ ಇಲ್ಲ ಎಂದರೆ ಅದರ ಅರ್ಥ ಏನು ?

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ಪಬ್ಲಿಕ್ ಎಕ್ಸ್‌ಚೇಂಜ್ ಅಲ್ಲ ಇಲ್ಲದೇಯಿರುವುದರಿಂದ ಆ ತಾಲ್ಲೂಕು ಆಫೀಸಿಗೆ ಟೆಲಿಫೋನನ್ನು ಕೊಡುವುದಕ್ಕಾಗುವುದಿಲ್ಲ ಎಂದು ಉತ್ತರ ಕೊಟ್ಟಿದೆ. ಪ್ರಶ್ನೆಯಲ್ಲಿ ಚನ್ನಗಿರಿ ಟೌನ್ ಹೆಡ್‌ಕ್ವಾರ್ಟರಿಗೆ ಯಾವಾಗ ಟೆಲಿಫೋನ್ ಎಕ್ಸ್‌ಚೇಂಜ್ ಕೊಡುತ್ತೀರೆಂದು ಕೇಳಿದ್ದಾರೆ. ಅದಕ್ಕೆ ಕೊಟ್ಟಿರುವ ಉತ್ತರ ಸ್ವಲ್ಪ ಪುಟ್ಟಿಗೆ ತಪ್ಪಾಗಿರುವ ಹಾಗೆ ಕಾಣುತ್ತದೆ. ತಾಲ್ಲೂಕು ಆಫೀನು ಎಂದು ತಿಳಿದುಕೊಂಡು ಪಬ್ಲಿಕ್ ಎಕ್ಸ್‌ಚೇಂಜ್ ಬಂದಾಗ ತಾಲ್ಲೂಕು ಆಫೀನುಗಳಿಗೆ ಇಂಥಿಂಥಾ ಕಡೆ ಮೈಸೂರು ಸರ್ಕಾರದವರು ಟೆಲಿಫೋನ್ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ.

ಶ್ರೀ ಕುಂದೂರು ರುದ್ರಪ್ಪ.—ಮೈಸೂರು ಸಂಸ್ಥಾನದಲ್ಲಿರತಕ್ಕ ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೂ ಟೆಲಿಫೋನ್ ಕೊಡಬೇಕೆಂದು ಸರ್ಕಾರದ ಆರ್ಡರಿಲ್ಲವೇ ?

ಶ್ರೀ ಬಿ. ರಾಚಯ್ಯ.—ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಇಂಡಿಯಾ ಸರ್ಕಾರದವರು ಎಲ್ಲಾ ತಾಲ್ಲೂಕುಗಳಿಗೂ ಕೂಡ ಟೆಲಿಫೋನ್ ಕೊಡಬೇಕೆಂದು ಸರ್ವೆ ಮಾಡಿದ್ದಾರೆ. ಅದರ ಪ್ರಕಾರ ಇದಕ್ಕೂ ಬರುತ್ತದೆ.

ಶ್ರೀ ಕುಂದೂರು ರುದ್ರಪ್ಪ.—ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ತಯಾರು ಮಾಡಿರುವ ಪಟ್ಟಿಯಲ್ಲಿ ಚನ್ನಗಿರಿ ತಾಲ್ಲೂಕು ಇದೆಯೋ ಅಥವಾ ಇಲ್ಲವೋ ?